

**ಕ್ಷಯ ಸಂಪೂರ್ಣವಾಗಿ ಗುಣಪಡಿಸಬಹುದಾದ ಕಾಯಿಲೆ. ಈ ಕಾಯಿಲೆಯ ನಿರ್ಮೂಲನಕ್ಕೆ ಸರ್ಕಾರ ಬೇರುಮಟ್ಟದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ರೋಗಿಗಳ ಬಳಿಗೆ ತೆರಳಿ ಚಿಕಿತ್ಸೆ ನೀಡುತ್ತಿದೆ.**

# ಕ್ಷಯ! ಬೇಡ ಭಯ!



**ಕ್ಷಯ!** ಹಾಗೆಂದರೆ ಸಾಕು ಜನಮಾನಸದಲ್ಲಿ ಭಯದ ಕಂಪನವೊಂದು ಅಲೆ ಅಲೆಯಾಗುತ್ತದೆ. ಹಿಂದೊಮ್ಮೆ ವಿಶ್ವವನ್ನು ಬೆಚ್ಚಿಬೀಳಿಸಿದ್ದ ಈ ಕಾಯಿಲೆ, ಈಗ ಮೊದಲಿನಷ್ಟು ತೀವ್ರವಾಗಿಲ್ಲವಾದರೂ – 'ಕ್ಷಯ'ವೆಂದರೆ ಈಗಲೂ ಜನಮಾನಸದಲ್ಲಿ ಆತಂಕವಿದೆ.

ವಿಶ್ವವನ್ನು ಬಾಧಿಸುತ್ತಿರುವ ಸಾರ್ವಜನಿಕ ಆರೋಗ್ಯ ಸಮಸ್ಯೆಗಳಲ್ಲಿ ಕ್ಷಯರೋಗವೂ ಒಂದು. ಪ್ರಪಂಚದಲ್ಲಿರುವ ಕ್ಷಯರೋಗಿಗಳಲ್ಲಿ ನಾಲ್ಕನೇ ಒಂದು ಭಾಗಕ್ಕಿಂತಲೂ ಹೆಚ್ಚು (ಶೇ. 25ಕ್ಕೂ ಹೆಚ್ಚು) ಮಂದಿ ಭಾರತದಲ್ಲಿದ್ದಾರೆ. ಕ್ಷಯರೋಗದಿಂದ ವಿಶ್ವದ ವಿವಿಧ ಭಾಗಗಳಲ್ಲಿ ಉಂಟಾಗುವ ಸಾವುಗಳಲ್ಲಿ ಶೇ. 34ರಷ್ಟು (ಮೂರನೇ ಒಂದು ಭಾಗಕ್ಕೂ ಹೆಚ್ಚು) ಭಾರತದಲ್ಲಿ ಸಂಭವಿಸುತ್ತಿವೆ.

ಭಾರತದಲ್ಲಿ ಕ್ಷಯರೋಗದಿಂದಾಗಿ 4 ಲಕ್ಷದ 80 ಸಾವಿರ ಮಂದಿ ಮರಣವನ್ನಪ್ಪಿದ್ದಾರೆ. ಕರ್ನಾಟಕದಲ್ಲಿ 2017ರ ಅಂಕಿಅಂಶಗಳಂತೆ 83 ಸಾವಿರದ 88 ಮಂದಿ ದಾಖಲಾದ ಕ್ಷಯರೋಗಿಗಳಿದ್ದಾರೆ. ಈ ಅಂಕಿಅಂಶಗಳು ಬೆಚ್ಚಿ ಬೀಳಿಸುವಂತಿದ್ದರೂ ಕ್ಷಯರೋಗದ ಬಗ್ಗೆ ಸಾರ್ವಜನಿಕರು ಆತಂಕಪಡುವ ಅಗತ್ಯವೇನಿಲ್ಲ. ಇದು ಸಂಪೂರ್ಣ ಗುಣಪಡಿಸಬಹುದಾದ ರೋಗ. ಸೂಕ್ತ ಚಿಕಿತ್ಸೆ ಪಡೆದರೆ ರೋಗಿ ಮೊದಲಿನ ಆರೋಗ್ಯಕರ ಜೀವನವನ್ನು ಹೊಂದಬಹುದು.

ಕ್ಷಯರೋಗವನ್ನು 1892ರಲ್ಲಿ ರಾಬರ್ಟ್ ಕಾಕ್ ಎಂಬ ವಿಜ್ಞಾನಿಯು ಕಂಡುಹಿಡಿದರು. ಕ್ಷಯರೋಗ 'ಮೈಕೋ ಬ್ಯಾಕ್ಟೀರಿಯಂ' ಎಂಬ ಬ್ಯಾಕ್ಟೀರಿಯಾದಿಂದ ಹರಡುವ ಕಾಯಿಲೆ. ಇದು ಗಾಳಿಯ ಮೂಲಕ ಹರಡುವುದು ಹೆಚ್ಚು. ಶ್ವಾಸಕೋಶವನ್ನು ಹೆಚ್ಚಾಗಿ ಬಾಧಿಸುತ್ತದೆ. ಕೂದಲು ಮತ್ತು ಉಗುರನ್ನು ಹೊರತುಪಡಿಸಿ ದೇಹದ ಯಾವುದೇ ಭಾಗಕ್ಕೂ ಕ್ಷಯ ತಗುಲಬಹುದು.

ಕ್ಷಯರೋಗಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಲಾಗಿದೆ:

1. ಶ್ವಾಸಕೋಶದ ಕ್ಷಯ.
2. ಶ್ವಾಸಕೋಶೇತರ ಕ್ಷಯ.

ಕ್ಷಯರೋಗವು ರೋಗನಿರೋಧಕ ಶಕ್ತಿ ಕಡಿಮೆ ಇರುವ ಎಲ್ಲಾ ವರ್ಗದ ಜನರಿಗೆ ಹರಡುವ ಸಾಧ್ಯತೆಯಿದೆ. ಕ್ಷಯರೋಗದ ಲಕ್ಷಣಗಳು ಕಾಣಿಸಿಕೊಂಡ ತಕ್ಷಣವೇ ರೋಗ ಪರೀಕ್ಷೆ ಮಾಡಿಸಿ, ಚಿಕಿತ್ಸೆ ಪ್ರಾರಂಭಿಸಿದರೆ ರೋಗವನ್ನು ಸಂಪೂರ್ಣವಾಗಿ ಗುಣಪಡಿಸಬಹುದು.

ಕರ್ನಾಟಕದಲ್ಲಿ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ 1997ರಿಂದಲೂ ಜಾರಿಯಲ್ಲಿದೆ. ನಂತರ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ ಮಾರ್ಚ್ 2006ರಿಂದ ಸಂಪೂರ್ಣವಾಗಿ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಯಿತು. ಸಂಪೂರ್ಣ ಗುಣಪಡಿಸಬಹುದಾದ